

# 'ತಂತ್ರಜ್ಞಾನ ಕಣ್ಣು ತೆರೆಸುವ ಸಾಧನ'

ಕ್ಯಾಲಿಫೋರ್ನಿಯಾದಿಂದ ಬಂದ ಸಿಯಾನ್ ತನ್ನ ಕುಟುಂಬ ಸದಸ್ಯರ ಜತೆಗೆ

ವಿದೇಶಗಳಿಂದ ಭಾರತ, ಕರ್ನಾಟಕದ ವಿವಿಧ ಭಾಗಗಳಿಗೆ ಬಂದವರಿಗೆ ನಮ್ಮ ನಾಡು ಒಂದಲ್ಲ ಒಂದು ರೀತಿಯಲ್ಲಿ ಇಷ್ಟವಾಗುತ್ತದೆ. ಕೆಲವರಿಗೆ ಇಲ್ಲಿನ ಹವಾಮಾನ, ವಾತಾವರಣ ಇಷ್ಟವಾದರೆ ಇನ್ನು ಕೆಲವರು ಇಲ್ಲಿನ ಊಟ ತಿಂಡಿ, ಆದರಾತಿಥ್ಯಗಳನ್ನು ಕಂಡು ಬೆರಗಾಗುತ್ತಾರೆ. ಮತ್ತೂ ಕೆಲವರಿಗೆ ಉದ್ಯೋಗ, ವಹಿವಾಟು ಅನಿವಾರ್ಯವಿರುತ್ತದೆ. ಹೀಗಾಗಿ ಕುಟುಂಬ ಸಮೇತರಾಗಿ ಬಂದು ಇಲ್ಲೇ ಭದ್ರವಾಗಿ ನೆಲೆ ನಿಲ್ಲುತ್ತಾರೆ. ಆದರೆ ಅಮೆರಿಕದ ಕ್ಯಾಲಿಫೋರ್ನಿಯಾದಿಂದ ಬಂದ ಸಿಯಾನ್ ಅವರಿಗೆ ಬೆಂಗಳೂರು ಇಷ್ಟವಾಗಲು ಕಾರಣವೇ ಬೇರೆ.

ಸಾಫ್ಟ್‌ವೇರ್ ಕಂಪೆನಿಯಲ್ಲಿ ಉದ್ಯೋಗಿಯಾಗಿರುವ ಸಿಯಾನ್ ಬೆಂಗಳೂರನ್ನು ಇಷ್ಟಪಡುವುದು ಇಲ್ಲಿನ ತಂತ್ರಜ್ಞಾನದ ಅಭಿವೃದ್ಧಿಯನ್ನು. ಐಟಿ ಹಬ್ ಆಗಿರುವ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯಮಕ್ಕೆ ವಿಪುಲ ಅವಕಾಶಗಳಿವೆ. ಇದನ್ನು ಸದ್ಬಳಕೆ ಮಾಡಿಕೊಳ್ಳುವುದು ನಮ್ಮ ಕೌಶಲ್ಯ ಮತ್ತು ಚಾಕಚಕ್ಯತೆಗೆ ಬಿಟ್ಟದ್ದು ಎಂಬುದು ಸಿಯಾನ್ ಅಭಿಪ್ರಾಯ.

ಅಂದ ಹಾಗೆ ಸಿಯಾನ್ 2005ರಲ್ಲಿ ಬೆಂಗಳೂರಿಗೆ ಬಂದವರು. ಬೇರೆ ಬೇರೆ ದೇಶಗಳಲ್ಲಿ ಕೆಲಸ ಮಾಡುವುದು, ಹೊಸ ಹೊಸ ಅನುಭವ ಪಡೆಯುವುದು ಇವರಿಗೆ ಹವ್ಯಾಸ ಆಗಿಬಿಟ್ಟಿದೆ. 'ತಂತ್ರಜ್ಞಾನ ಎಂಬುದು ಜನರ ಕಣ್ಣು ತೆರೆಸುವ ಸಾಧನ' ಎಂಬುದು ಇವರ ವ್ಯಾಖ್ಯಾನ. ಹಾಗೆ ನೋಡಿದರೆ ಇವರು ಅನೇಕ ದೇಶಗಳನ್ನು ಸುತ್ತಿದ್ದಾರೆ. ಎಲ್ಲಿಯೂ ಭದ್ರವಾಗಿ ನೆಲೆ ನಿಲ್ಲಲಿಲ್ಲ. ಅವರ ಉದ್ಯೋಗ ಕೈಹಿಡಿದದ್ದು ಬೆಂಗಳೂರಿನಲ್ಲೇ. ಹೀಗಾಗಿ ಕುಟುಂಬ ಸಮೇತ ಗಟ್ಟಿಯಾಗಿ ನೆಲೆಯೂರಿದ್ದೂ ಬೆಂಗಳೂರಿನಲ್ಲೇ.

ಕಳೆದ 10 ವರ್ಷಗಳಿಂದ ಬೆಂಗಳೂರಿನಲ್ಲೇ ನೆಲೆಸಿರುವ ಸಿಯಾನ್ ಇದು ಫೇವರೆಟ್ ಸಿಟಿ ಅನಿಸಿಬಿಟ್ಟಿದೆಯಂತೆ. ಅವರು ಬೇರೆ ಯಾವುದೇ ದೇಶದಲ್ಲೂ ಒಂದು ವರ್ಷಕ್ಕಿಂತ ಹೆಚ್ಚು ನಿಲ್ಲಲೇ ಇಲ್ಲವಂತೆ. ಆದರೆ ಬೆಂಗಳೂರು ವಾಸ ಅಷ್ಟೊಂದು ಹಿಡಿಸಿದೆಯಂತೆ. ಮೈಕ್ರೊಸಾಫ್ಟ್ ರೀಸರ್ಚ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿರುವ ಸಿಯಾನ್, ಇದೇ ಕಂಪೆನಿಯ ಕೆಲಸದ ನಿಮಿತ್ತ ಅವರು ಬೇರೆ ಬೇರೆ ದೇಶ ಸುತ್ತಿರುವುದಂತೆ.

'ಬೆಂಗಳೂರು ಐಟಿ ಹಬ್ ಆಗಿರುವುದು ಖುಷಿ ನೀಡಿದೆ. ಇಲ್ಲಿ ಮಧ್ಯಮ ವರ್ಗದ ಜನರೇ ಹೆಚ್ಚು ಎಂಬುದನ್ನು ಗುರುತಿಸಿದ್ದೇನೆ. ಶ್ರೀಮಂತರೂ ಇದ್ದಾರೆ, ಬಡ ವರ್ಗದವರೂ ಬೆಂಗಳೂರಿಗೆ ಆತುಕೊಂಡಿದ್ದಾರೆ. ಬೇರೆ ರಾಜ್ಯ, ದೇಶಗಳಿಂದ ಬಂದಿರುವ ಬಹುತೇಕ ಜನ ಉದ್ಯೋಗದ ನಿಮಿತ್ತವೇ ಬೆಂಗಳೂರಿಗೆ ಬಂದವರಾಗಿದ್ದಾರೆ. ಹೀಗಾಗಿ ಇಲ್ಲಿ ವೈವಿಧ್ಯಮಯ ಜನರನ್ನು ಕಾಣಬಹುದು. ಇಲ್ಲಿನ ವಾತಾವರಣವೂ ಚೆನ್ನಾಗಿದೆ' ಎನ್ನುತ್ತಾರೆ ಸಿಯಾನ್.

ತಾಂತ್ರಿಕವಾಗಿ ಪರಿಣತರಾಗಿರುವ ಸಿಯಾನ್ ವೆಬ್‌ಸೈಟ್ ಅಭಿವೃದ್ಧಿ ಮಾಡುತ್ತಾರೆ. ಇದರ ಜತೆಗೆ ಮೊಬೈಲ್ ಆ್ಯಪ್ಸ್, ಎಸ್‌ಎಂಎಸ್ ಮತ್ತು ವಾಯ್ಸ್ ಸರ್ವಿಸ್ ಅನ್ನೂ ಅಭಿವೃದ್ಧಿಪಡಿಸಿದ್ದಾರೆ.

'ಬೆಂಗಳೂರು ತಂತ್ರಜ್ಞಾನ ವಲಯದಲ್ಲಿ ಬಹಳ ಮುಂದಿದೆ. ಇಲ್ಲಿಗೆ ಬಂದ ಮೇಲೆ ಬಹಳ ಬದಲಾಗಿದ್ದೇನೆ, ತಂತ್ರಜ್ಞಾನದಲ್ಲಿ ಬಹಳಷ್ಟು ತಿಳಿದುಕೊಂಡೆ. ಇಲ್ಲಿ ಕಲಿಯುವಂಥದ್ದು ಸಾಕಷ್ಟು ಇದೆ. ಹೊಸ ಹೊಸ ತಾಂತ್ರಿಕ ಪ್ರಯೋಗಗಳನ್ನು ಮಾಡಿದ್ದೇನೆ. ಉದ್ಯೋಗದಲ್ಲಿ ಏನಾದರೂ ಹೊಸತನ್ನು ಸಾಧಿಸುವ ಆಸೆ. ಅಂತಹ ಅವಕಾಶ ಇಲ್ಲಿದೆ ಎಂಬುದನ್ನು ನಾನು ಬಲ್ಲೆ. ಇಲ್ಲಿ ಇಡೀ ದಿನ ಅತ್ಯಂತ ಬ್ಯುಸಿ ಆಗಿರುವ ಕಾರಣ ನನಗೆ ದಿನಕ್ಕೆ ಕನಿಷ್ಠ ನಾಲ್ಕು ಗಂಟೆಗಳೂ ನಿದ್ದೆ ಮಾಡಲು ಸಿಗುತ್ತಿಲ್ಲ' ಎನ್ನುತ್ತಾರೆ ಸಿಯಾನ್.

ವಾರಾಂತ್ಯದಲ್ಲಿ ಕುಟುಂಬ ಸದಸ್ಯರ ಜತೆಗೆ ಹಾಗೂ ಕೆಲವೊಮ್ಮೆ ಬೆಂಗಳೂರಿನ ಎಂ.ಜಿ. ರಸ್ತೆ, ಇಂದಿರಾನಗರಗಳಲ್ಲಿರುವ ಕೆಲವು ಹೋಟೆಲ್‌ಗಳಲ್ಲಿ ಊಟ ತಿಂಡಿ ಮಾಡಿ ಕಾಲ ಕಳೆಯುವ ಸಿಯಾನ್ ಈಗಾಗಲೇ ಮುಂಬಯಿ, ದೆಹಲಿ, ಚೆನ್ನೈ, ಕೋಲ್ಕತ್ತಾ, ಅಹಮದಾಬಾದ್, ಗೋವಾ ಮುಂತಾದ ಮಹಾನಗರಗಳಲ್ಲಿ ಪ್ರವಾಸ ಮಾಡಿ ಬಂದಿದ್ದಾರೆ. ಆದರೆ ಎಲ್ಲ ಸಿಟಿಗಳಿಗಿಂತಲೂ ಬೆಂಗಳೂರೇ 'ದಿ ಬೆಸ್ಟ್' ಎನ್ನುವುದು ಸಿಯಾನ್ ಅನಿಸಿಕೆ.

ಬೆಂಗಳೂರಿಗರ ಆತಿಥ್ಯವನ್ನು ಬಹಳ ಇಷ್ಟಪಡುವ ಸಿಯಾನ್, 'ಇಂತಹ ಆದರಾತಿಥ್ಯ ಬೇರೆ ಯಾವ ದೇಶಗಳಲ್ಲೂ ಇಲ್ಲ, ಆತ್ಮೀಯವಾಗಿ ಉಪಚರಿಸುವ ರೀತಿ ನಿಜಕ್ಕೂ ಅಚ್ಚರಿ ತರುವಷ್ಟು ಖುಷಿಯಾಗಿದೆ' ಎನ್ನುತ್ತಾರೆ.

★ ಅವನೀಶ್